


# ಬ್ಯಾಗ್ ಮ್ಯೂಸಿಯಂ








ಆಧುನಿಕ ನಾರಿಯರು ಬಗೆ ಬಗೆಯ ಜಂಬದ ಕೈಚೀಲ (ವ್ಯಾನಿಟಿ ಬ್ಯಾಗ್)ಗಳನ್ನು ಕೈಯಲ್ಲಿರಿಸಿಕೊಂಡೋ ಅಥವಾ ಭುಜಕ್ಕೇರಿಸಿಕೊಂಡೋ ಅಡ್ಡಾಡುವುದು ಈಗಿನ ಫ್ಯಾಷನ್. ಆದರೆ ಈ ಟ್ರೆಂಡ್ ಇತ್ತೀಚೆಗೆ ಬಂದಿರುವಂಥಲ್ಲ. ಬಹಳ ಹಿಂದಿನ ಕಾಲದಿಂದಲೂ ಹೆಣ್ಣು ಮಕ್ಕಳಿಗೆ ಅಂದ ಚಂದದ ಕೈಚೀಲ ಹಾಗೂ ಪರ್ಸ್‌ಗಳ ಮೇಲೆ ಅದೆಂಥದೋ ವಿಶೇಷ ಮೋಹ.

ನೆದರ್ಲಂಡಿನ ಆಮ್‌ಸ್ಟರ್‌ಡ್ಯಾಂನಲ್ಲಿ ನಾನಾ ನಮೂನೆಯ ಬ್ಯಾಗ್ ಮತ್ತು ಪರ್ಸ್‌ಗಳ ವಿಶಿಷ್ಟ ಮ್ಯೂಸಿಯಂ ಇದೆ. ಮಧ್ಯಯುಗದಿಂದ ಹಿಡಿದು ಇಂದಿನ ಆಧುನಿಕ ಕಾಲದವರೆಗೂ ಸಂಗ್ರಹಿಸಿಟ್ಟಿರುವ ಐತಿಹಾಸಿಕ ಕೈಚೀಲ, ಬಣ್ಣ ಬಣ್ಣದ ಪರ್ಸ್‌ಗಳು ಹಾಗೂ ವಿವಿಧ ಗಾತ್ರಗಳ ಸೂಟ್‌ಕೇಸ್‌ಗಳನ್ನು ಇಲ್ಲಿ ನೋಡಬಹುದು. ಇಡೀ ಪ್ರಪಂಚದಲ್ಲಿ, ಈ ರೀತಿಯ ಮೂರು ಮ್ಯೂಸಿಯಂಗಳಿವೆ. ಆದರೆ ಆಮ್‌ಸ್ಟರ್‌ಡ್ಯಾಂ ಮ್ಯೂಸಿಯಂ ಮಾತ್ರ ಉಳಿದೆರಡು ಮ್ಯೂಸಿಯಂಗಳಿಗಿಂತ ಬಲು ದೊಡ್ಡದು, ಏಕೆಂದರೆ ಇಲ್ಲಿ 4000ಕ್ಕೂ ಅಧಿಕ ಬ್ಯಾಗ್‌ಗಳ ಬೃಹತ್ ಸಂಗ್ರಹವೇ ಇದೆ. ಈ ಮ್ಯೂಸಿಯಂಗೆ ಹೆಂಗಳೆಯರೇ ಅಧಿಕ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಇಲ್ಲಿರುವ ಸಂಗ್ರಹದಲ್ಲಿ 16 ನೇ ಶತಮಾನದ ಮೇಕೆ ಚರ್ಮದಿಂದ ತಯಾರಿಸಿರುವ ಕಬ್ಬಿಣದ ಕೊಂಡಿಯುಳ್ಳ ಗಂಡಸರ ಬೆಲ್ಟ್ ಪೌಚ್ ಅತ್ಯಂತ ದುಬಾರಿ ಬೆಲೆಯುಳ್ಳದ್ದು.

ಆಮ್‌ಸ್ಟೆಲ್ವೀನ್ ನಗರದಲ್ಲಿ ಪುರಾತನ ವಸ್ತುಗಳನ್ನು ವ್ಯಾಪಾರ ಮಾಡುವ ಹೆನ್ಡ್ರಿಕ್ಜೆ ಇವೊ ಎಂಬಾಕೆ ಕಳೆದ 35 ವರ್ಷಗಳಿಂದಲೂ ಸಂಗ್ರಹಿಸಿರುವ ಫಲವೇ, ಈ ಮ್ಯೂಸಿಯಂ ರೂಪುಗೊಳ್ಳಲು ಮುಖ್ಯ ಕಾರಣ. ಅತ್ಯಲ್ಪ ಅವಧಿಯಲ್ಲಿ ಈಕೆ ಇಷ್ಟೊಂದು ಬ್ಯಾಗ್‌ಗಳನ್ನು ಸಂಗ್ರಹಿಸಿದ್ದಾಳೆ.

ಕೈಚೀಲಗಳ ಮೇಲೆ ವಿಶೇಷ ಮೋಹ ಇರುವವರು ಈ ಮ್ಯೂಸಿಯಂಗೆ ಭೇಟಿ ನೀಡಬಹುದು.

■ ವಿದ್ಯಾ ವಿ. ಹಾಲಭಾವಿ